# ಕರ್ನಾಟಕ ವಿಧಾನ ಪರಿಷತ್ತು

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1191

02. ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆ ಕ್ಷೇತ್ರ)

03. ಉತ್ತರಿಸುವ ದಿನಾಂಕ : 23/12/2021

04. ಉತ್ತರಿಸುವ ಸಚಿವರು. : ಮಾನ್ಯ ಗೃಹ ಸಚಿವರು.

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ 3 ವರ್ಷಗಳಲ್ಲಿ ಉಡುಪಿ ಜಿಲ್ಲೆಯಲ್ಲಿ ಸೈಬರ್ ಕ್ರೈಂಗಳ ಮೇಲೆ ದಾಖಲಾದ ದೂರುಗಳ ಸಂಖ್ಯೆ ಎಷ್ಟು : ಇವುಗಳಲ್ಲಿ ಪತ್ತೆ ಹಚ್ಚಿದ, ಪತ್ತೆ ಹಚ್ಚಲಾಗದ, ಎಫ್.ಐ.ಆರ್. ದಾಖಲಾದ ಮತ್ತು ಚಾರ್ಜ್‌ಶೀಟ್ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು : (ಜಿಲ್ಲಾವಾರು, ವರ್ಷವಾರು ಪ್ರಕರಣವಾರು ಮಾಹಿತಿ ನೀಡುವುದು)</td><td>ಉಡುಪಿ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ದಾಖಲಾದ ದೂರುಗಳು/ಎಫ್.ಐ.ಆರ್.ಗಳ ಸಂಖ್ಯೆ, ಅವುಗಳ ಪೈಕಿ ಪತ್ತೆಯಾದ ಹಾಗೂ ಪತ್ತೆ ಹಚ್ಚಲಾಗದ ಪ್ರಕರಣಗಳ ಸಂಖ್ಯೆ ಮತ್ತು ಚಾರ್ಜ್‌ಶೀಟ್ ಸಲ್ಲಿಸಲಾದ ಪ್ರಕರಣಗಳ ವರ್ಷಾವಾರು ಮಾಹಿತಿ ಈ ಕೆಳಕಂಡಂತಿದೆ.
<table>
<tr><th>ವರ್ಷ</th><th>ದಾಖಲಿಸಿದ ಒಟ್ಟು ಸೈಬರ್ ಕ್ರೈಂಗಳ ಸಂಖ್ಯೆ</th><th>ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ</th><th>ಪತ್ತೆ ಹಚ್ಚಲಾಗದ ಪ್ರಕರಣಗಳ ಸಂಖ್ಯೆ</th><th>ಚಾರ್ಜ್‌ಶೀಟ್ ಸಲ್ಲಿಸಲಾದ ಪ್ರಕರಣಗಳ ಸಂಖ್ಯೆ</th></tr>
<tr><td>2019</td><td>30</td><td>7</td><td>17</td><td>6</td></tr>
<tr><td>2020</td><td>50</td><td>7</td><td>24</td><td>5</td></tr>
<tr><td>2021 (30/11/2021)</td><td>43</td><td>2</td><td>0</td><td>2</td></tr>
</table></td></tr>
<tr><td>ಆ)</td><td>ಕಳೆದ 3 ವರ್ಷಗಳಲ್ಲಿ ಉಡುಪಿ ಜಿಲ್ಲೆಯಲ್ಲಿ ಮೊಬೈಲ್ ಟವರ್, ಸಿಸಿ ಟಿವಿ, ಮುಂತಾದ ತಂತ್ರಜ್ಞಾನಗಳ ಪತ್ತೆ ಹಚ್ಚಲಾದ ಮೇಲೆ ಪ್ರಕರಣಗಳ ಸಂಖ್ಯೆ ಎಷ್ಟು :(ವರ್ಷವಾರು, ಪ್ರಕರಣವಾರು ಮಾಹಿತಿಯನ್ನು ನೀಡುವುದು) ಉಡುಪಿ ಜಿಲ್ಲೆಯಲ್ಲಿ ಇಲಾಖೆಯಿಂದ ಮತ್ತು ದಾನಿಗಳ ಕೊಡುಗೆಯಿಂದ ಅಳವಡಿಸಲಾದ ಸಿಸಿ ಟಿವಿಗಳ ನಿರ್ವಹಣೆಯನ್ನು ಯಾವ ಏಜೆನ್ಸಿಯಿಂದ ನಿರ್ವಹಿಸಲಾಗುತ್ತದೆ : ತಗಲಿದ ವಾರ್ಷಿಕ ವೆಚ್ಚವೆಷ್ಟು : ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ಅಳವಡಿಸಲಾದ ಸಿ.ಸಿ ಕ್ಯಾಮೆರಾಗಳು ನಿರ್ವಹಣೆಯ ಕೊರತೆಯಿಂದಾಗಿ ಉಪಯೋಗಕ್ಕೆ ಬಾರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ : ಸರ್ಕಾರದ ಕ್ರಮವೇನು :</td><td>ಕಳೆದ 3 ವರ್ಷಗಳಲ್ಲಿ ಉಡುಪಿ ಜಿಲ್ಲೆಯಲ್ಲಿ ಮೊಬೈಲ್ ಟವರ್, ಸಿ ಸಿ ಟಿವಿ ಮುಂತಾದ ತಂತ್ರಜ್ಞಾನಗಳ ಸಹಾಯದಿಂದ ಪತ್ತೆ ಹಚ್ಚಲಾದ ವರ್ಷವಾರು ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿದೆ.
<table>
<tr><th>ವರ್ಷ</th><th>ಮೊಬೈಲ್‌ಟವರ್ ಮೂಲಕ ಪತ್ತೆ ಹಚ್ಚಿದ ಪ್ರಕರಣಗಳು</th><th>ಸಿಸಿ ಟಿವಿ ಮುಖಾಂತರ ಪತ್ತೆ ಹಚ್ಚಿದ ಪ್ರಕರಣಗಳು</th></tr>
<tr><td>2019</td><td>0</td><td>0</td></tr>
<tr><td>2020</td><td>1</td><td>0</td></tr>
<tr><td>2021 (30/11/2021)</td><td>0</td><td>0</td></tr>
</table>
ಉಡುಪಿ ಜಿಲ್ಲೆಯಲ್ಲಿ ಇಲಾಖೆಯಿಂದ ಮತ್ತು ಸಾರ್ವಜನಿಕರ ಕೊಡುಗೆಯಿಂದ ಅಳವಡಿಸಲಾಗಿರುವ ಎಲ್ಲಾ ಸಿಸಿ ಟಿವಿಗಳು ಉತ್ತಮ ಸ್ಥಿತಿಯಲ್ಲಿದ್ದು, ಸದರಿ ಸಿಸಿ ಟಿವಿಗಳ ನಿರ್ವಹಣೆಯನ್ನು ಮಾಡುತ್ತಿರುವ ಏಜೆನ್ಸಿಯ ವಿವರಗಳು ಮತ್ತು ಅವುಗಳ ನಿರ್ವಹಣೆಗೆ ತಗಲುವ ವಾರ್ಷಿಕ ವೆಚ್ಚದ ವಿವರಗಳನ್ನು <u>ಅನುಬಂಧದಲ್ಲಿ</u> ನೀಡಲಾಗಿದೆ.</td></tr>
</table>

| | | |
|---|---|---|
| ಇ) | ತಂತ್ರಜ್ಞಾನದ ನೆರವಿನಿಂದ ಅಪರಾಧ ತಡೆ ಮತ್ತು ನಿಯಂತ್ರಣಕ್ಕೆ ಸರ್ಕಾರದ ಕ್ರಮಗಳು ಯಾವುವು : ಈ ಕುರಿತು ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಲಾಗಿದೆಯೇ : ತಂತ್ರಜ್ಞಾನಗಳ ಮೂಲಕ ಕ್ಷಿಪ್ರ ಗುಪ್ತಚರ ವರದಿಯನ್ನು ಪಡೆಯುವ ಸಂಬಂಧ ಸರ್ಕಾರದ ಕ್ರಮವೇನು? | **ಸರ್ಕಾರವು ಸೈಬರ್ ಅಪರಾಧಗಳನ್ನು ತಡೆಗಟ್ಟಲು ಹಾಗೂ ಸೈಬರ್ ಅಪರಾಧಗಳನ್ನು ಪತ್ತೆ ಹಚ್ಚಲು ಈ ಕೆಳಕಂಡ ಆಧುನಿಕ ತಂತ್ರಜ್ಞಾನದ ಕ್ರಮಗಳನ್ನು ಅನುಸರಿಸಲಾಗುತ್ತಿದೆ. .**<br><br>1) UFED4PCರಿಂದ ಮೊಬೈಲ್‌ನಲ್ಲಿರುವ ಮಾಹಿತಿಯನ್ನು ಸಂಗ್ರಹಿಸಿ ತನಿಖೆಗೆ ಅಳವಡಿಸಿಕೊಳ್ಳಲಾಗುತ್ತಿದೆ.<br>2)AXIOM-D Software ನಿಂದ ಕಂಪ್ಯೂಟರ್ ಸಿಸ್ಟಮ್‌ನಲ್ಲಿ ಇರುವ ಮಾಹಿತಿಯನ್ನು ಸಂಗ್ರಹಿಸಿ ತನಿಖೆಗೆ ಅಳವಡಿಸಿಕೊಳ್ಳಲಾಗುತ್ತಿದೆ.<br>3) Facebook, Twitter, Instagram, Whatsapp, Google ಮುಂತಾದವುಗಳನ್ನು ಸಂಪರ್ಕಿಸಿ, ಕೂಡಲೇ ಮಾಹಿತಿಯನ್ನು ಪಡೆದುಕೊಂಡು ತನಿಖೆ ಕೈಗೊಳ್ಳಲಾಗುತ್ತಿದೆ.<br>4) Handcom MD next software ನ್ನು ಬಳಸಿ ಮೊಬೈಲ್‌ನಲ್ಲಿ ಇರುವ Chip & J tag method ನಿಂದ ಮಾಹಿತಿಯನ್ನು ಪಡೆದು ತನಿಖೆಗೆ ಅಳವಡಿಸಿಕೊಳ್ಳಲಾಗುತ್ತಿದೆ.<br>5) PC-3000 Software ನಿಂದ ಹಾಳಾಗಿರುವ ಹಾರ್ಡ್‌ಡಿಸ್ಕ್‌ನಿಂದ ಮಾಹಿತಿಯನ್ನು ಪಡೆದುಕೊಂಡು ತನಿಖೆಗೆ ಅಳವಡಿಸಿಕೊಳ್ಳಲಾಗುತ್ತಿದೆ.<br>6) ಪ್ರತಿ CEN Police Station ಗಳಿಗೆ ಆರೋಪಿಗಳ ವಿದ್ಯುನ್ಮಾನ ಸಾಕ್ಷ್ಯಗಳ ಮಿರರ್ ಇಮೇಜ್/ಎಕ್ಸ್‌ಟ್ರಾಕ್ಷನ್ ಮಾಡಿಸುವ ಮೂಲಕ ಅಗತ್ಯ ಸಾಕ್ಷ್ಯಾಧಾರಗಳ ಸಂಗ್ರಹಣೆಗೆ ಒಂದೊಂದು ಮಿರರ್ ಇಮೇಜ್ ಅನಲೈಸರ್ ಪರಿಕರವನ್ನು ಒದಗಿಸಲಾಗಿದ್ದು, ಈ ಪರಿಕರವು ಆರೋಪಿಗಳ ಪತ್ತೆಕಾರ್ಯಕ್ಕೆ ಹೆಚ್ಚಿನ ಸಹಾಯಕವಾಗಿರುತ್ತದೆ.<br>**ಸೈಬರ್ ಕ್ರೈಂ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಹಾಗೂ ಸಾರ್ವಜನಿಕರಿಗೆ ಈ ಬಗ್ಗೆ ಜಾಗೃತಿ ಮೂಡಿಸಲು ಸರ್ಕಾರವು ಈ ಕೆಳಕಂಡ ಪ್ರಚಾರ ಕ್ರಮಗಳನ್ನು ಕೈಗೊಂಡಿರುತ್ತದೆ.**<br>1) ಸೈಬರ್ ಅಪರಾಧ ಪ್ರಕರಣಗಳಲ್ಲಿ ವಂಚನೆಗೊಳಗಾದ ನೊಂದವರ /ಶೋಷಿತರ ಅನುಕೂಲಕ್ಕಾಗಿ ಪ್ರತಿ ಜಿಲ್ಲೆಯಲ್ಲಿ ಹಾಗೂ ನಗರ ವ್ಯಾಪ್ತಿಯಲ್ಲಿ ಒಂದೊಂದು ವಿಶೇಷ ಸೈಬರ್ ಪೊಲೀಸ್ ಠಾಣೆಗಳನ್ನು ತೆರೆಯಲಾಗಿದೆ.<br>2) ಪ್ರತಿ ಪೊಲೀಸ್ ಠಾಣೆಯಲ್ಲಿಯೂ ಸಹ ದೂರನ್ನು ಸ್ವೀಕರಿಸುವಂತೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆ.<br>3) ಸೈಬರ್‌ಕ್ರೈಂ ಅಪರಾಧ ಪ್ರಕರಣಗಳನ್ನು ತಡೆಗಟ್ಟುವ ಸಲುವಾಗಿ ಸಿಐಡಿ ಕಛೇರಿಯಲ್ಲಿ "Centre for Cyber crime Investigation & Digital Forensic Training & Research"ರವರ ಸಹಯೋಗದೊಂದಿಗೆ ವಿಶೇಷ ಸೈಬರ್ ಪೊಲೀಸ್ ಠಾಣೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ವಿಶೇಷ ತರಬೇತಿಯನ್ನು ನೀಡಲಾಗುತ್ತಿದೆ.<br>4)ಸಿ.ಐ.ಡಿ. ಕಛೇರಿಯಲ್ಲಿ ಸಿ.ಎಫ್.ಯು (Cyber Forensic Unit) |

| | | |
|---|---|---|
| | | ವಿಭಾಗವನ್ನು ಹಿರಿಯ ಅಧಿಕಾರಿಗಳ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸಿ.ಎಫ್.ಯು ವಿಭಾಗದಲ್ಲಿ ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಪ್ರಕರಣಗಳನ್ನು ಭೇದಿಸಲಾಗುತ್ತಿದೆ.<br>5) ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಕಿರುಚಿತ್ರ ಹಾಗೂ ಪೋಸ್ಟರ್‌ಗಳನ್ನು ಹಾಕಲಾಗುತ್ತಿದೆ.<br>6) ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಸೈಬರ್ ಅಪರಾಧಗಳ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. .<br>7) ಸಾರ್ವಜನಿಕರಿಗೆ ಸೈಬರ್ ಕ್ರೈಂ ಕುರಿತು ಅರಿವು ಮೂಡಿಸಲು ಟಿ.ವಿ ಮಾಧ್ಯಮ, ದಿನಪತ್ರಿಕೆ, ಪೇಸ್ ಬುಕ್, ಹಾಗೂ ಬ್ಯಾಂಕ್ ಅಧಿಕಾರಿಗಳ ಸಹಭಾಗಿತ್ವದಲ್ಲಿ ಮತ್ತು ಪೊಲೀಸ್ ಇಲಾಖೆಯ ಟ್ವೀಟರ್ ಖಾತೆಯ ಮೂಲಕ ಮುಂಜಾಗ್ರತಾ ಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡಲಾಗುತ್ತಿದೆ.<br>8) ಸಾರ್ವಜನಿಕರ ತ್ವರಿತ ಸ್ಪಂದನೆಗಾಗಿ 112 ದೂರವಾಣಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಿ ಆ ಮೂಲಕ ದೂರುಗಳನ್ನು ದಾಖಲಿಸಿಕೊಂಡು ಆರೋಪಿಗಳ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ.<br>9) ಓ.ಟಿ.ಪಿ ಮತ್ತು ಇತರೆ ಮಾಹಿತಿ ಕೇಳಿ ಕರೆ ಮಾಡುವ ಅಪರಿಚಿತರ ಬಗ್ಗೆ ಜಾಗೃತಿ ಮೂಡಿಸಲಾಗಿದೆ.<br>10) ಸಾಮಾಜಿಕ ಜಾಲತಾಣಗಳಲ್ಲಿ ಫ್ರೆಂಡ್‌ಷಿಪ್ ರಿಕ್ವೆಸ್ಟ್ ಮತ್ತು ನಕಲಿ ಫೇಸ್‌ಬುಕ್‌ಗಳನ್ನು ರಚಿಸಿ ಮೋಸ ಮಾಡುವವರ ಬಗ್ಗೆ ಎಚ್ಚರದಿಂದಿರಲು ಜಾಗೃತಿ ಮೂಡಿಸಲಾಗಿದೆ.<br>11) ವಾಟ್ಸಪ್ ಮತ್ತು ವಿಡಿಯೋ ಕಾಲ್‌ಗಳ ಮೂಲಕ ವಂಚಿಸಿ ಹನಿಟ್ರ್ಯಾಪ್ ಮಾಡಿ ಮೋಸ ಮಾಡುವವರ ಬಗ್ಗೆ ಎಚ್ಚರದಿಂದಿರಲು ಜಾಗೃತಿ ಮೂಡಿಸಲಾಗಿದೆ.<br>12) ನೆಟ್ ಬ್ಯಾಂಕಿಂಗ್, ಎಟಿಎಂ. ಡಿಜಿಟಲ್ ಮನಿ ವರ್ಗಾವಣೆ ಸಮಯದಲ್ಲಿ ಮೋಸಮಾಡುವವರ ಬಗ್ಗೆ ಎಚ್ಚರದಿಂದರಲು ಜಾಗೃತಿ ಮೂಡಿಸಲಾಗಿದೆ.<br>13)ಸೈಬರ್ ಅಪರಾಧ ಘಟಿಸಿದ ಕೂಡಲೆ "ಗೋಲ್ಡನ್ ಅವರ್" ಬಗ್ಗೆ ಜಾಗೃತಿ ಮೂಡಿಸಲಾಗಿದೆ. |

HD 47PCQ2021

(ಆರಗ ಜ್ಞಾನೇಂದ್ರ)
ಗೃಹ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಮಖ್ಯೆ :1191ಕ್ಕೆ ಸಂಬಂಧಿಸಿದ ಅನುಬಂಧ**

ಇಲಾಖಾ ವತಿಯಿಂದ ಅಳವಡಿಸಲಾದ ಸಿಸಿ ಕ್ಯಾಮೆರಾಗಳ ವಿವರ :

| SL. NO. | PROJECT NAME | SUPPLY YEAR | SUPPLIED BY | NO. OF CAMERAS | PRESENT STATUS | | SUPPLIED / AMC FIRM | TENDER/AMC AMOUNT |
|---|---|---|---|---|---|---|---|---|
| | | | | | TOAL | WORKING | | |
| 01 | Security of Coastal and Naxal affected areas **(Phase I)** | 2018 | IGP ,WR Mangalore | 51 + 4 ANPR (16 Important Junctions and Places) | 51+4=55 | Good | Kerala State Electronics Development Corporation (KELTRON) Bangalore. | 7,85,16,793/- ( DK UDUPI U.K CHIKKAMALURU) **AMC continued for 3 Year's** |
| 02 | Under Modernization Scheme; CCTV supplied for Naxal affected and Coastal area Districts. **(Phase II)** | 2019 | IGP ,WR Mangalore | 39 (18 Important Junctions and Places) | 39+18=57 | Good | FABCON Technical System, Mangalore. | 5,06,81,000 ( MANGALORE CITY , ANF KARKAL, UDUPI & U.K DISTRICT ) **AMC continued for 5 Year's** |
| | Police Station Surveillance TOTA L 23 NO'S POLICE STATION | **2019** | Chief Office Bangalore | 92 (4 Camera each for PS | 92 | Good | Nisa Industrial Service Pvt. Ltd. Bangalore. | **Tender from C.O. Bangaluru** |
| TOTAL QTY CCTV | | | | | 204 | | | |

**ಸಾರ್ವಜನಿಕರ ಕೊಡಿಗೆಯಿಂದ ಅಳಡಿಸಿರುವ ಸಿಸಿಟಿವಿಗಳ ವಿವರಗಳು**

| ಕ್ರ.ಸಂ | ಠಾಣೆಯ ಹೆಸರು | ಅಳವಡಿಸಲಾದ ಸ್ಥಳ | ಒದಗಿಸಿದ ಸಂಸ್ಥೆ/ವ್ಯಕ್ತಿಯ ಹೆಸರು | ನಿರ್ವಹಣೆ | ತಗುಲಿದ ವಾರ್ಷಿಕ ವೆಚ್ಚ |
|---|---|---|---|---|---|
| 1 | ಹೆಬ್ರಿ | ಹೆಬ್ರಿ ಬಸ್ ನಿಲ್ದಾಣ ಮತ್ತು ಮುದ್ರಾಡಿಜಂಕ್ಷನ್ | ಸಾರ್ವಜನಿಕರು ಹೆಬ್ರಿ ಮತ್ತು ಮುದ್ರಾಡಿ. 6 ಕ್ಯಾಮರಾ | ಹೆಬ್ರಿ ಬಸ್ ನಿಲ್ದಾಣದ ಡಿ.ವಿಆರ್ ಹೆಬ್ರಿಠಾಣೆಯಲ್ಲಿ ಹಾಗೂ ಮುದ್ರಾಡಿಯಲ್ಲಿರುವ ಕ್ಯಾಮರಾವನ್ನು ಮುದ್ರಾಡಿಗ್ರಾಮ ಪಂಚಾಯತ್‌ನಿಂದ ನಿರ್ವಹಣೆ ಮಾಡಲಾಗುತ್ತಿದೆ. | – |
| 2 | ಕಾರ್ಕಳ ನಗರ | ಸಾಣೂರುಚೆಕ್ ಪೋಸ್ಟ್ | ಸಿಟಿ ಲಯನ್ಸ್ ಶ್ರೀಮತಿ ಜ್ಯೋತಿರಮೇಶ್ ಸ್ಥಾಪಕಾದ್ಯಕ್ಷರು ಲಯನ್ಸ್ ಸಿಟಿ ಕಾರ್ಕಳ 2 ಕ್ಯಾಮರಾ | ಸಾಣೂರು ಗ್ರಾಮ ಪಂಚಾಯತ್ ಕಛೇರಿ ನಿರ್ವಹಣೆ | – |